Regd No B G 155 Sri (715) 2 — 18—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಶ್ರೀಮನೆಬಂಸ್ಕೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಂನಿರತ ಎಂ ಎಸ್ ಕೃಷ್ಣಂಎವ್ ಪೈ

ಹೋಟಲು ಮೇಲಿನ ನಿರ್ಬಂಧ ಹೋಯಿತು

ಮೈಸೂರು ನಗರದಲ್ಲಿ ಕಾಲಿಡ ಹೊಟೆಗೆ ಬಂದಿರುವುದರಿಂದ ಹೋಟಿಲು ಇತ್ಯಾದಿಗಳ ಮೇಲೆ ಹಾಕಿರುವ ನಿರ್ಬಂಧ ತೆಗೆದುಹಾಕಲಾಗಿದೆಯೆಂದು ಮುನಿಸಿಪಲ್ ಪ್ರೆಸ್ತ್ ನೋಟು ತಿಳಿಸುತ್ತದೆ

★

ಲೈಬ್ರರಿಗಳಿಗೆ

ಮೈಸೂರು — ದೇಶದಲ್ಲಿ ಲೈಬ್ರರಿಗಳ ಅಭಿವೃದ್ಧಿಗೆ 4 ಕೋಟಿ ರೂಗಳು ಇಡಲಾಗುವುದೆಂದು ಪಾರ್ಲಿಮೆಂಗು ಕಮಿಷ್ಟ ಸದಸ್ಯ ವಿ ಕೆ ಆರ್ ವಿ ರಾವ್ ಹೇಳಿದರು.

❋

ಜೋನಸ್ ಅಜ್ಜಿ ವಿರುದ್ಧ ರಿಟ್

ಹೈದರಾಬಾದು — ಕೇಂದ್ರ ಸರಕಾರದ ಬೋನಸ್ಸು ಕುರಿತ ಸುಗ್ರೀವಾಜ್ಞೆ ವಿರುದ್ಧ ಆಂಧ್ರ ಪ್ರದೇಶ ಹೈ ಕೋರ್ಟಿನಲ್ಲಿ ಹಾಕಿದ ರಿಟ್ ಅಡ್ಮಿಟ್ಟಾಯಿತು

❋

ಶಾಂತಿ ಪುರುಷ

ಲಂಡನ್ — ಭಾರತ ಪ್ರಧಾನಿ ಶಾಸ್ತ್ರಿಗಳು ಇಲ್ಲಿ ಪ್ರಥಮಷ್ಟ ಬಹಿರಂಗ ಗಿ ಕಾಣಿಸಿಕೊಂಡಾಗ, ಶಾಂತಿ ಪು ಷ, ಶಾಂತಿ ಸ್ಥಾಪಕ, ಎಂದು ಜನರು ಪ್ರಶಂಸಿಸಿದರು

❋

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಉಪಾಧ್ಯವಂಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಪಕ್ತ, ಜ್ಯೋತಿರ್ವಿದ್ವನ್ಮಣಿ
ಪಂಪಶ್ರೀ ಕೃಷ್ಣಜೋಯಿಸರಿಂದ

19 ಶನಿವಾರ ಪಂಚಮಿ ಧನಿಷ್ಠ

ಪೀಟಿ

ಸಿಂಗಪುರ — ಹನಾಯಿಗೆ 50 ಮೈಲಿ ದೂರದಲ್ಲಿ ರಷ್ಯ ತಯಾರಿಕೆಯ ಎಂ ಐ ಎಂ ವಿಮಾನಗಳನ್ನು ಅಮೇರಿಕ ಜಟ್ ಫೈಟರುಗಳು ನಿನ್ನೆ ಹೊಡೆದುರುಳಿಸಿದವು — ಏಪ್ರಿಲಿನಲ್ಲಿ ರಷ್ಯಾ ಎಂ ಐ ಎಂ ಎರಡು ಅಮೇರಿಕಾ ವಿಮಾನಗಳನ್ನ ಹೊಡೆದುರುಳಿಸಿದ್ದವು : ಪೀಟಿಯಾಯ್ತು

❋

ಕೆಲಸಕ್ಕೆ ತೆಗೆದುಕೊಳ್ಳಬೇಕು

ಬೆಂಗಳೂರು — ತಮ್ಮ ಹಿರಿಯ ಕೇಳಿಕೆಯಲ್ಲಿ ಮಿಸ್ ಮೇರಿ ದೇವಾಸಿಯಾರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬುದೊಂದಾಗಿದೆ ಎಂದು ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ತಿಳಿಸಿದೆ

❋

ವಿಯಟ್ನಾಂ

ಲಂಡನ್ — ವಿಯಟ್ನಾಮಿನ ಶಾಂತಿ ಕಾರ್ಯಕ್ಕಾಗಿ ತಾಪೂ ಮತ್ತು ಇಬ್ಬರು ರಾಮದ್ವೆಲ್ಲು ನಾಯಕರು ಮಾಸ್ಕೋಗೆ ಬೇಟಿಕೊಡಬೇಕೆಂದು ಬ್ರಿಟೀಷು ಪ್ರಧಾನಿ ವಿಲ್ಸನರು ಹೇಳಿದರು.

★

ಬೈಸಿಕಲ್ ಮೇಲೆ ವಿಶ್ವಪರ್ಯಟನೆ

ಬೆಂಗಳೂರು — ಬೈಸಿಕಲ್ಲಿನ ಮೇಲೆ ವಿಶ್ವಪರ್ಯಟನಕ್ಕೆ ಹೊರಟಿರುವ ರತಿಲಾಲ್ ನಿನ್ನೆ ಇಲ್ಲಿಗೆ ಬಂದರು — ಈಗಾಗಲೇ 5129 ಮೈಲಿ ಸುತ್ತಿರುವುದಾಗಿಯೂ, ಬರೋಡಾದಿಂದ ಈ ವರ್ಷದ ಫೆಬ್ರವರಿ 22 ರಲ್ಲಿ ಹೊರಟಿದ್ದೆಂದೂ, ಇಲ್ಲಿವರೆಗೆ ಒಂದು ಪಂಕ್ಚರೂ ಆಗಿಲ್ಲವೆಂದೂ ಹೇಳಿದರು.

★

ಇಂಗ್ಲೀಷು ಮುಂದುವರಿಯಲು ಶಾಸನದ ತಿದ್ದುಪಡಿ

ನವದೆಹಲಿ — ಇಂಗ್ಲೀಷು ಮುಂದುವರಿಯುವ ವಿಷಯದಲ್ಲಿ ನೆಹರೂ ಇತ್ತೀಚಿನ ಭರವಸೆ ಅನುಸರಿಸಿ ಅಧಿಕೃತ ಭಾಷಾ ಶಾಸನ ತಿದ್ದುಪಡಿಯ ಶಾಸನದ ಬಗ್ಗೆ ಈ ತಿಂಗಳು ಕಡೆಯಲ್ಲಿ ಪ್ರಧಾನಿಗಳು ದೆಹಲಿಗೆ ಬಂದನಂತರ ಮುಗಿಸುವ ನಿರೀಕ್ಷೆ ಇದೆ.

❋

ಸಲಹೆ

ವಿಶ್ವಸಂಸ್ಥೆ — ಭಾರತವು ಅಡಕ್ಕಿನ ಲೇನಲ್ಲಿರುವ ತನ್ನ ಲೈಸನ್ಸು ರಕ್ಷಿಸಲು ತೆಗೆದುಕೊಂಡಿರುವ ಕಾರ್ಯಕ್ರಮವನ್ನು ನಿಲ್ಲಿಸುವಂತೆ ಪಾಕಿಸ್ತಾನದ ಪರ ಅಮೆರಿಕ ಭಾರತಕ್ಕೆ ಒತ್ತಾಯಪಡಿಸಿರುವುದೆಂದು ವರದಿಯಾಗಿದೆ — ಈ ರಸ್ತೆಯು ಪಾಕಿಸ್ತಾನ ಅಕ್ರಮಿಸಿರುವ ಕಾಶ್ಮೀರದ ಗಡಿ ಹತ್ತಿರ ಹೋಗುತ್ತಿದ್ದು ಅದನ್ನು ಪಾಕಿಸ್ತಾನ ಸೈನಿಕರು ಅಗಾಗ್ಗೆ ಕಳ್ಳರ ಸುತ್ತಿರುತ್ತಾರೆ.

ಕ್ರಿಕೆಟ್ ಆಟಗಳು

ಮದರಾಸು — ಭಾರತದಲ್ಲಿ ವಿಸ್ಟ್ ಇಂಡೀಸ್ ಕ್ರಿಕೆಟು ಪ್ರವಾಸಕ್ಕೆ ಅಪೇಕ್ಷಿಸಲಾದ 32500 ಪೌಂಡುಗಳನ್ನು ಬ್ರಿಟನ್ನಿನಲ್ಲಿರುವ ಭಾರತ ಕ್ರಿಕೆಟ್ ಬೆಂಬಲಿಗರು ಮತ್ತು ಭಾರತ ಕ್ರಿಕೆಟಿನಲ್ಲಿ ವಿಶ್ವಾಸವಿರುವ ಆಂಗ್ಲೇಯರೂ ಶೇಖರಿಸಬಹುದೆಂದು, ಭಾರತ ಕ್ರಿಕೆಟು ಬೋರ್ಡಿನ ಅಧಿಕಾರಿಗಳೊಬ್ಬರಿಗೆ ಪತ್ರ ಬಂದಿದೆ.

★

ಸಾಲ

ನವದೆಹಲಿ — ಭಾರತಕ್ಕೆ ರೂ 92-3 ಕೋಟಿ ಸಾಲವನ್ನು ಅಮೇರಿಕಾ ಕೊಡುವ ಬಗ್ಗೆ ಒಪ್ಪಂದವಾಯಿತು

❋

ಪರೀಕ್ಷೆ ಫಲಿತಾಂಶ

ಬೆಂಗಳೂರು — ಕಾರ್ಪೊರೇಷನ್ ಹೈಸ್ಕೂಲುಗಳಿಂದ ಈ ವರ್ಷ ಎಸ್ಸೆಸ್ಸೆಲ್ಸಿಗೆ ಕುಳಿತಿದ್ದ 1365 ವಿದ್ಯಾರ್ಥಿಗಳಲ್ಲಿ 234 ಮಂದಿ ಪೂರ್ತಿ ಪಾಸಾದರು



ಭಾಷಾ ಸಮಸ್ಯೆಗೊಂದು ' ರಾಮಬಾಣ '

—0—

(ಮುಂದುವರಿದುದು)

ಹದಿನಾಲ್ಕು ಮುಖ್ಯ ಭಾರತೀಯ ಭಾಷೆಗಳಲ್ಲೊಂದಾದ ' ಹಿಂದಿ ' ರಾಷ್ಟ್ರ ಭಾಷೆಯಾದಲ್ಲಿ ಎಲ್ಲ ಭಾಷೆಗಳವರೂ ತಮ್ಮ ತಮ್ಮ ಭಾಷೆಗೆ ಪ್ರಾತಿನಿಧ್ಯ ಕೊಡಬೇಕೆಂದೂ ಅಷ್ಟೇ ಏಕೆ, ಅವರವರದೇ ರಾಷ್ಟ್ರ ಭಾಷೆಯಾಗಲೆಂದು ಹೇಳುವುದೂ ಮುಂದುವರಿಯುತ್ತಾರೆ ; ಅದ್ದರಿಂದ ನಮ್ಮ ಭಾರತೀಯ ಸಂಸ್ಕೃತಿ ಎಂದಿನಿಂದಿದೆಯೋ, ವಾಸನವನ ಅಗಸ್ತ್ಯನ ಜೊತೆಯಲ್ಲೇ ಅಗಮಿಸಿದ, ಗೀರ್ವಾಣ ಭಾಷೆಯಾದ, ದೇವದೇವತೆಗಳ ಭಾಷೆಯಾದ, ದೇವ-ನಾಗರೀ ಲಿಪಿಯ ' ಸಂಸ್ಕೃತ ' ವೊಂದೇ ರಾಷ್ಟ್ರ ಭಾಷೆಯಾಗಲು ಅರ್ಹವಾಗಿದೆ : ನಲವತ್ತು ಕೋಟಿ ಜನ ಸಮೂಹವನ್ನೂ ಏಕಮಾತ್ರೀಕರಿಸುವ ಭಾಷೆ ಇದೊಂದೇ ! ಏಕೆಂದರೆ, ಸಂಸ್ಕೃತವೇ ಭಾರತ, ಭಾರತವೇ ಸಂಸ್ಕೃತ ; ಭಾರತೀಯ ಉಚ್ಚ ನಾಗರೀಕತೆ, ಅಪಾರಧಾರಣವಾದ ಸಾಮರ್ಥ್ಯ, ಮಹೋನ್ನತವಾದ ವಿಜ್ಞಾನ, ಕಲೆ, ಸಾಹಿತ್ಯ, ವೇದಾಂತ ಚಿಂತನೆಯಲ್ಲಿ ಏಕತೆ, ಇವೆಲ್ಲಕ್ಕೂ ಸಂಸ್ಕೃತವೇ ಮೂಲವಾಗಿದೆ ; ಅಪೌರುಷೇಯವಾದ ವೇದಗಳು, ಶ್ರುತಿ, ಸ್ಮೃತಿ, ಉಪನಿಷತ್ತು, ಇತಿಹಾಸ ರಾಮಾಯಣ, ಮಹಾಭಾರತ, ಗೀತೆ, ಧರ್ಮಜಿಜ್ಞಾಸೆ, ಬ್ರಹ್ಮ ಜಿಜ್ಞಾಸೆ ವಿಶ್ವಮಾಂಸ ತರ್ಕ ನ್ಯಾಯ ಅರ್ಥಿಕ ಸಾಮಾಜಿಕ ನೀತಿ ವಿಜ್ಞಾನ (ಆರೋಗ್ಯ) ಆಯುರ್ವೇದ ಮತ್ತು ಅಚಾರ ರೀತಿ ನೀತಿಯಿಂದ ವಿಶ್ವಕ್ಕೇ ಮಾರ್ಗದರ್ಶಕವಾಗಿ ಜಗತ್ತಿನ ಅಂಧಕಾರಕ್ಕೆ ಜ್ಞಾನ ದೀವಿಗೆಯಂತೆ ಪುರೆಯುತ್ತಿರುವ ಭಾಷೆ ! ವ್ಯಾಸರು ವಾಲ್ಮೀಕಿ ಆರ್ಯಭಟ್ಟ ಭಾಸ್ಕರಾಚಾರ್ಯ ಪಾಣಿನಿ ನಾಗಾರ್ಜುನ ಕಾಳಿದಾಸ ಭಾಸ ದಂಡಿ ಬಾಣ ಶಂಕ್ರಾಚಾರ್ಯ ಮುಂತಾದ (ಕೋಟಿಕೋಟಿಯಲ್ಲಿ ಕೆಲವೇ ಉದಹರಿಸಿದೆ) ಪರುಗಳಿಂದ, ಜಗತ್ತಿಗೇ ಜ್ಞಾನದಾತರಾಗಿರುವ, ಸರಿಸಾಟಿಯಿಲ್ಲದ ಇವರುಗಳನ್ನು ಕೊಟ್ಟಿರುವ ' ಸಂಸ್ಕೃತ ' ಎಂತಹ ಧನ್ಯ : ಒಂದಾನೊಂದು ಕಾಲದಲ್ಲಿ ಜಗತ್ತಿನ ಭಾಷೆಯಾಗಿದ್ದ (world language) ಭಾಷೆಯನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡಲು ಅಭ್ಯಂತರವೇನು ?

(ಮುಂದುವರಿಯುವುದು)

Sri 'SATYAVADI' Daily

Oldest Newspaper in the State]— Golden Jubilee 1966



Help The GORAKSHANA

.... ಗೋರಕ್ಷಣೆಗೆ ಬೆಂಬಲ ನೀಡಿ ....

ವಿಳಾಸ— ಗೋರಕ್ಷಾ ಅಭಿಯಾನ ಚಾಮರಾಜಪುರಂ ಮೈಸೂರು 4

ವುಡ್‌ಲ್ಯಾಂಡ್ ನಲ್ಮೆಯ 5 ನೇ ವಾರ

ಶಿನಿ

ಪ್ರೇಕ್ಷಕರಿಂದ ಪ್ರಶಂಸೆ ಪಡೆಯುತ್ತಿತ್ತಾ ವೈಭವವಾಗಿ ನಡೆಯುತ್ತಿದೆ

ಸುಂದರ ದೃಶ್ಯಕಳು, ಸಮೃದ್ಧ ಸಂಗೀತ, ಆಕರ್ಷಣೀಯ ನೃತ್ಯಗಳು

ಹಾಸ್ಯವಿನೋದಗಳಿಂದ ತೂಡಿದ ಈಸ್ಟ್‌ಮೆನ್ ಕಲರ್ ಚಿತ್ರ

ಜಾನವರ್ (ಹಿಂದಿ) Janwar

ಪಾತ್ರ— ಶಮ್ಮಿ ಕಪೂರ್, ರಾಜಶ್ರೀ, ಪೃಥ್ವೀರಾಜ್, ರಾಜೇಂದ್ರನಾಥ್

ಅಪೆರ— 18–6–65 ರಿಂದ

ಎಂ. ಜಿ ರಾಮಚಂದ್ರ — ಭಾನುಮತಿ ಅಭಿನಯಿಸಿರುವರು

ಮಮ್ಮಯೋಗಿ

ಅಮೋಘ ಕಮಿಳು ಚಿತ್ರ ..... ಹೊಸ ಕಾಪಿ

ವಿಧಿ

ಸುಧಾ

ಉತ್ತಮ ಟಾನಿಕ್

SHAKTI SUDHA

A Superb Tonin

Edited, printed and published by Dharma prachara nirata M S Krishna Rao, at the Satyavadi Press Chamarajapuram, Mysore 4